## ಪದಬಂಧ



ಎಡದಿಂದ ಬಲಕ್ಕೆ :

1. ಶೀತ ಕಾಲದಲ್ಲಿ ಆ ಪ್ರದೇಶದಲ್ಲಿ ಎಲ್ಲವೂ ಕಸ ಕೊಳೆ ಬೆರೆತದ್ದೇ 4
3. ವೀಳ್ಯ ಸೇವಿಸುವವರು ಈಗೀಗ ಬಹಳ ಇಲ್ಲ 3
4. ಜ್ವರದಿಂದ ಬಳಲುತ್ತಿದ್ದಾನೆ ಒಬ್ಬ ಮಂತ್ರಿ 3
6. ಸಾರ್ವಜನಿಕರ ಕ್ಷೇಮಕ್ಕಾಗಿ ಈ ಆಡಳಿತ ಯಂತ್ರ 4
7. ಸಂಪ್ರದಾಯ ಏನೇ ಇರಲಿ, ಗಳಿಕೆಯಂತೂ ಬೇಕಲ್ಲ? 4
9. ಸರಸದಲ್ಲಿ ನಗೆ ಉಕ್ಕಿಸುವ ಕಾವ್ಯ ರುಚಿ 4
11. ಮುಂದಿನ ಮನೆ ತುಂಬ ಒಂದೇ ಕುಟುಂಬದ ಜನ 4
13. ಕಿಂಕರನ ಸ್ಥಿತಿ ಕಂಡು ಮನ ಕರಗುವ ಭಾವನೆ 4
15. ಅಮ್ಮನ ಆಣತಿಯಂತೆ ಅವನು ಪಡೆದ ಒಪ್ಪಿಗೆ 4
17. ಸರ್ವ ವಿಧ ರುಚಿಗಳನ್ನೂ ಅರಿವಾಗಿಸುವುದು ನಾಲಿಗೆಯೇ ತಾನೇ? 3
18. ಹಿಮಾವೃತವಾಗಿದ್ದರೂ ಕಾಣಿಸಬಹುದೇ ಸೂರ್ಯ? 3
19. ಸಕಾಲದಲ್ಲಿ ಸಾಲ ತೀರಿಸದವರನ್ನು ಕಂಡರೆ ಅಗೌರವ 4

ಮೇಲಿಂದ ಕೆಳಕ್ಕೆ:

1. ಕೈಲಾಸದೊಡೆಯನ ಪೂಜೆಗೆ ತಕ್ಕ ಪವಿತ್ರ ಬಿಂದಿಗೆ 3
2. ತ್ವರೆ ಮಾಡಿದರೆ ಸಿಕ್ಕೀತೇ ಈ ಬೆಳ್ಳನ್ನ ಲೋಹ? 3
3. ವಿಧ ವಿಧ ವಿಚಾರಗಳಾದರೂ ಬರೀ ಚರ್ಚೆ, ವಾಕ್ಸಮರ 3
5. ಬಗೆಹರಿಸಲಾಗದ್ದು. ಅದು ಅಂಥ ಗುಟ್ಟು 3
7. ಶಬರಿ ಮಲೆಗೆ ಹೊರಡುವವರದು ಭಾರೀ ಸಂಭ್ರಮ 4
8. ಮುಂದಿನ ದಾರಿ ಸ್ಪಷ್ಟವಾದರಷ್ಟೇ ಮನಸ್ಸಿಗೆ ಸಮಾಧಾನ 3
9. ಹೆದರಿಕೆಯನ್ನು ಹೋಗಲಾಡಿಸುವ ಆತನ ಪ್ರಯತ್ನ ಹೃದಯಪೂರ್ವಕ 3
10. ಮೊಸರನ್ನು ಹಂಚುವ ವಿಷಯಕ್ಕೆ ಯುದ್ಧವೇ ಆಯಿತು 3
12. ಎಷ್ಟು ಮಂದಿ ಬಂದರೂ ಹಿಡಿಸಬಲ್ಲ ವಿಶಾಲ ದೇಗುಲ 3
14. ನೂರು ದಿನ ಎಚ್ಚರಿಕೆಯಿಂದ ಇರಲೇಬೇಕೆಂಬ ತೀರ್ಮಾನ 3
15. ಆತನಿರುವ ಸ್ಥಳದ ದೂರ ಬಹಳ ಏನಿಲ್ಲ 3
16. ಮಿತಿ ಮೀರುತ್ತಿದೆ ನೋಡಿ, ಅಜ್ಞಾನ ,ಅಂಧಕಾರ 3

---

### 15–10–2020 ಉತ್ತರಗಳು

ಎಡದಿಂದ ಬಲಕ್ಕೆ:

1. ಅನುಚಿತ 3. ಸಮಗ್ರ 4. ವರ್ಣನೆ 6. ಜತೆಗಾರ 7. ಸಮಾನತೆ 9. ಮರುಭೂಮಿ 11. ಮರೀಚಿಕೆ 13. ನವಗಾನ 15. ರಮ್ಯಕಾಲ 17. ರಿಷಭ 18. ಹವನ 19. ಸರಿದಾರಿ

ಮೇಲಿಂದ ಕೆಳಕ್ಕೆ:

1. ಅಗ್ರಜ 2. ತವರ 3. ಸಜ್ಜನ 5. ನೆತ್ತರು 7. ಸಮಕ್ಷಮ 8. ತೆಗಳಿಕೆ 9. ಮತಿಹೀನ 10. ಮಿಥ್ಯಾಜ್ಞಾನ 12. ಚಿಕೋರಿ 14. ವದನ 15. ರಭಸ 16. ಲಹರಿ

ಪ್ರಶ್ನಾಂಕಣ

# ಅಂಟಾರ್ಕ್ಟಿಕಾದಲ್ಲಿ ಎಷ್ಟಿದೆ ಹಿಮರಾಶಿ?

ಅಂಟಾರ್ಕ್ಟಿಕಾ ಅದೊಂದು ಭೂಖಂಡ. ಧರೆಯ ದಕ್ಷಿಣ ಧ್ರುವವನ್ನು ಒಳಗೊಂಡಿರುವ ಈ ಭೂಖಂಡದ ವೈಶಿಷ್ಟ್ಯ ಏನೆಂದರೆ ಅದು ಸಂಪೂರ್ಣವಾಗಿ ಹಿಮಾವೃತವಾಗಿದೆ (ಚಿತ್ರ 1, 2). 14 ದಶಲಕ್ಷ ಚದರ ಕಿಲೋಮೀಟರ್ ವಿಸ್ತಾರದ (ಎಂದರೆ ನಮ್ಮ ರಾಷ್ಟ್ರದ ನಾಲ್ಕು ಮಡಿಗೂ ಅಧಿಕ ವಿಸ್ತಾರದ) ಈ ಭೂಖಂಡದ ಶೇಕಡಾ 97.5 ರಷ್ಟು ಪ್ರದೇಶ ಶಾಶ್ವತ ಹಿಮದಿಂದ ಆವರಿಸಲ್ಪಟ್ಟಿದೆ. ಈ ಹಿಮಹಾಸಿನ ಸರಾಸರಿ ದಪ್ಪ 2 ಕಿ.ಮೀಗೂ ಕೊಂಚ ಅಧಿಕ ಇದೆ; ಕೆಲ ಪ್ರದೇಶಗಳಲ್ಲಂತೂ 5 ಕಿ.ಮೀ ಮುಟ್ಟಿದೆ (ಚಿತ್ರ 3)

ಅಂಟಾರ್ಕ್ಟಿಕಾ ಭೂಖಂಡದ ನೆಲದ ಮೇಲೆ ಹೀಗೆ ಸಂಗ್ರಹವಾಗಿರುವ ಹಿಮರಾಶಿಯ ಒಟ್ಟು ಪ್ರಮಾಣ 26.5 ದಶಲಕ್ಷ ಘನ ಕಿಲೋಮೀಟರ್‌ನಷ್ಟಿದೆ. ಒಂದು ಘನ ಕಿ.ಮೀ ಹಿಮ ಒಂದು ಶತಕೋಟಿ ಟನ್ ತೂಗುತ್ತದೆ. ಹಾಗಾಗಿ ಅಂಟಾರ್ಕ್ಟಿಕಾದಲ್ಲಿರುವ ಹಿಮ ರಾಶಿಯ ಒಟ್ಟು ತೂಕ 265 ಕೋಟಿ ಕೋಟಿ ಟನ್‌ಗೆ ಸಮನಾಗುತ್ತದೆ (ಇದು 5,30,000 ಕೋಟಿ ಕೋಟಿ ಲೀಟರ್ ನೀರಿಗೆ ಸಮ). ಭೂಮಿಯಲ್ಲಿರುವ ಒಟ್ಟು ಹಿಮದ ಶೇಕಡಾ 90 ಭಾಗ ಅಥವಾ ಧರೆಯ ಒಟ್ಟು ಶುದ್ಧ ಜಲದ ಶೇಕಡಾ 70 ಭಾಗ ಘನರೂಪದಲ್ಲಿ ಅಂಟಾರ್ಕ್ಟಿಕಾದಲ್ಲೇ ಇದೆ! ಆದ್ದರಿಂದಲೇ ಅಂಟಾರ್ಕ್ಟಿಕಾದಲ್ಲಿ ಇರುವ ಹಿಮರಾಶಿಯೆಲ್ಲ ಕರಗಿ ಕಡಲಿಗೆ ಇಳಿದರೆ ಜಗದಾದ್ಯಂತ ಸಾಗರ ಮಟ್ಟ 58 ಮೀಟರ್ (ಎಂದರೆ 190 ಅಡಿ) ಹೆಚ್ಚುತ್ತದೆ. ಈ ಕಲ್ಪನಾತೀತ ಪ್ರಮಾಣದ ಹಿಮರಾಶಿಯ ಹೊರೆಯಿಂದಾಗಿ ಈ ಭೂಖಂಡದ ನೆಲ ಸಾಗರ ಮಟ್ಟದಿಂದ 2.5 ಕಿಲೋ ಮೀಟರ್‌ನಷ್ಟು ಕೆಳಕ್ಕಿಳಿದಿದೆ.

ವಿಸ್ಮಯ ಏನೆಂದರೆ, ಮೂಲತಃ ಅಂಟಾರ್ಕ್ಟಿಕಾ ಈಗಿನಂತಹ ಹಿಮ ಲೋಕವೇ ಆಗಿರಲಿಲ್ಲ; ಅದು ಈಗಿರುವಂತೆ ಧರೆಯ ತಳದಲ್ಲೂ ಇರಲಿಲ್ಲ.



ಪ್ರಾಚೀನ ಕಾಲದಲ್ಲಿ ಸಮಭಾಜಕದ ಬಳಿ ಬೆಚ್ಚನೆಯ ಪರಿಸರದಲ್ಲಿದ್ದ ಅಂಟಾರ್ಕ್ಟಿಕಾದಲ್ಲಿ ಉನ್ನತ ಪರ್ವತಗಳಿದ್ದುವು, ಪ್ರವಹಿಸುವ ನದಿಗಳಿದ್ದುವು, ನಿತ್ಯ ಹಸಿರಿನ ಅಡವಿಗಳೂ ಇದ್ದುವು. ಆದರೆ ಭೂಖಂಡಗಳ ಅಲೆತದ ವಿದ್ಯಮಾನದಿಂದಾಗಿ ಇತರ ಎಲ್ಲ ಭೂಖಂಡಗಳಂತೆಯೇ ಅಂಟಾರ್ಕ್ಟಿಕಾ ಕೂಡ ಸ್ಥಾನ ಪಲ್ಲಟಗೊಂಡು ಈಗ್ಗೆ ಸುಮಾರು 34 ದಶಲಕ್ಷ ವರ್ಷಗಳ ಹಿಂದಿನ ವೇಳೆಗೆ ಪ್ರಸ್ತುತದ ನೆಲೆ ತಲುಪಿತ್ತು. ಆ ವೇಳೆಗೆ ಭೂ ವಾಯುಮಂಡಲದಲ್ಲಿ ಇಂಗಾಲದ ಡೈ ಆಕ್ಸೈಡ್‌ನ ಪ್ರಮಾಣ ಕ್ಷಿಪ್ರವಾಗಿ ಇಳಿಯುತ್ತ ಪ್ರತಿ ದಶಲಕ್ಷಕ್ಕೆ 600 ರಷ್ಟು ಕ್ಷೀಣ ಮಟ್ಟಕ್ಕೆ ಬಂದಿತ್ತು. ಹಾಗಾಗಿ ಅಂಟಾರ್ಕ್ಟಿಕಾದಲ್ಲಿ ತೀವ್ರ ಶೀತಲ ಪರಿಸ್ಥಿತಿ ಉಂಟಾಗಿ ಭಾರೀ ಹಿಮರಾಶಿ ಸಂಗ್ರಹವಾಗತೊಡಗಿತು. ಹಾಗೇ ಶೇಖರವಾಗುತ್ತ, ಹೆಚ್ಚು ಹೆಚ್ಚು ಹಿಮ ಸೇರ್ಪಡೆಗೊಳ್ಳುತ್ತ ಒಟ್ಟಾರೆ ಈಗಿನ ಮಹಾನ್ ಹಿಮ ರಾಶಿ ಅಸ್ತಿತ್ವದಲ್ಲಿದೆ.

■ ಎನ್. ವಾಸುದೇವ್